**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 58/2019**

| | | | |
|---|---|---|---|
| **ಹೆಸರು** | : | **ಕೃಷ್ಣ** | **ಚಾ.ಸಾ. 3** |
| **ತಂದೆಯ ಹೆಸರು** | : | **ಚಂದ್ರಪ್ಪ** | **ಪ್ರಾ.ಸಾ. 1** |
| **ವಯಸ್ಸು** | : | **48 ವರ್ಷ** | **ದಿನಾಂಕಃ 11-07-2024** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ಚಂದ್ರಂಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ಮತ್ತು 2 ರವರು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ್ಗೆ 4-5 ವರ್ಷದ ಹಿಂದೆ ಪೋಲಿಸರು ನಮ್ಮ ಊರಿಗೆ ಬಂದಾಗ ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ತಾವು ಬಂದಿರುವ ಸಾಕ್ಷಿಗಾಗಿ ನನ್ನ ಸಹಿಯನ್ನು ಪಡೆದಿದ್ದಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕಃ 29-05-2018 ರಂದು ಮದ್ಯಾಹ್ನ 3-30 ರಿಂದ 4-30 ರವರೆಗೆ ಐನೊಳ್ಳಿ ಗ್ರಾಮದ ಸಂತೋಷ ರವರ ರೇಷನ ಅಂಗಡಿಯ ಮುಂದೆ ಪೋಲಿಸರು ಪಂಚನಾಮೆ ಮಾಡಿದದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನನ್ನ ಜೊತೆ ಚಾಸಾ-1 ಮತ್ತು 3 ರವರು ಇದ್ದರು ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ.ಎಸ್.ಎಸ್. ವಕೀಲರಿಂದಃ- ಇಲ್ಲಾ.**

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**